ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—ಕರ್ನಾಟಕ ಪುರಸಭೆ ಕಾನೂನಿನ ಪ್ರಕಾರ ಯಾವುದೇ ನಿವೇಶನವನ್ನೂ ನಿಯಮಾವಳಿ ೭೨ (೨)ರ ಪ್ರಕಾರ ಮಂಜೂರಾತಿ ಮಾಡಿದ್ದೇನೆ ಹೊರತು ಕಾನೂನು ಬಾಹಿರವಾಗಿ ಮಾಡಿರುವಂತಿಲ್ಲ. ನೀವು ಹೇಳಿದಂತೆ ಆಗಿದ್ದರೆ ಅದನ್ನು ತನಿಖೆ ಮಾಡಿಸುತ್ತೇನೆ. ೨೮-೨-೧೯೮೦ರಲ್ಲಿ ರಾಜಶೇಖರ್ ಎಂಬುವರಿಗೆ ನೀಡಿದ್ದು ಎಂದು ಹೇಳಿದ್ದಾರೆ. ಅದನ್ನು ಪರಿಶೀಲನೆ ಮಾಡುತ್ತೇನೆ. ಮತ್ತು ಯಾವುದೇ ಅಧಿಕಾರಿ ಮೇಲೆ ಆರೋಪ ಮಾಡುವಾಗ ಆ ದೋಷಗಳು ನಿಖರವಾಗಿ ಏನೆಂದು ತಿಳಿಸಿದಾಗ ಅದನ್ನು ಪೂರ್ಣವಾಗಿ ತನಿಖೆ ಮಾಡಿಸುತ್ತೇನೆ. ಈಗಾಗಲೇ ತಪ್ಪಿತಸ್ಥ ಅಧಿಕಾರಿಗಳ ಮೇಲೆ ತನಿಖೆ ಮಾಡಿಸಿ ಕ್ರಮ ಕೈಗೊಳ್ಳಲಾಗಿರುವುದು, ಈಗಾಗಲೇ ನಿಮ್ಮ ಗಮನಕ್ಕೆ ಬಂದಿರಬಹುದು, ಈ ಪ್ರಕರಣದಲ್ಲೂ ನಿಖರ ಮಾಹಿತಿಗಳಿದ್ದರೆ ಕೊಡಿ.

(೧೪) ಕರ್ನಾಟಕ ಸಾಬೂನು ಕಾರ್ಖಾನೆಯ ೨೭೦ ಕಾರ್ಮಿಕರಿಗೆ ನಿವೃತ್ತಿ ಮಾಡುವ ಬಗ್ಗೆ ಸೂಚನೆ ಕೊಟ್ಟಿರುವುದು:

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೇ, ಕರ್ನಾಟಕ ಸೋಪು ಮತ್ತು ಡಿಟರ್ಜೆಂಟ್ಸ್ ಕಂಪನಿ ಸಾರ್ವಜನಿಕ ಕ್ಷೇತ್ರದಲ್ಲಿ ನಡೆಯುತ್ತಿರುವ ಫ್ಯಾಕ್ಟರಿ. ಈ ಫ್ಯಾಕ್ಟರಿಯಲ್ಲಿನ ೨೭೦ ಕಾರ್ಮಿಕರನ್ನು ಕೆಲಸದಿಂದ ರಿಟ್ರೆಂಜ್ ಮಾಡಬೇಕೆಂದು ಕಂಪನಿಯು ಆಡಳಿತ ವರ್ಗ ನಿರ್ಧರಿಸಿದೆ. ನೌಕರರಿಗೆ ನೋಟೀಸ್ ಕೊಡಲಾಗಿದೆ. ಯಾವುದೇ ಫ್ಯಾಕ್ಟರಿಯಲ್ಲಿನ ಕಾರ್ಮಿಕರನ್ನು ರಿಟ್ರೆಂಜ್ ಮಾಡಬೇಕಾದಲ್ಲಿ ಕೈಗಾವಿವಾದ ಮಸೂದೆ ಪ್ರಕಾರ ಸರ್ಕಾರದಿಂದ ಪರವಾನಗಿ ಪಡೆಯಬೇಕಾಗುತ್ತದೆ. ಈ ರೀತಿಯ ಸರ್ಕಾರದ ಅನುಮತಿ ಪಡೆಯದೆ ಕಾರ್ಮಿಕರನ್ನು ಕೆಲಸದಿಂದ ತೆಗೆದುಹಾಕಲು ಯತ್ನಿಸಿದಲ್ಲಿ ಕಾನೂನು ಉಲ್ಲಂಘನೆಯನ್ನು ಸರ್ಕಾರದ ಕೈಗಾರಿಕೆಯೇ ಮಾಡಿದಂತಾಗುತ್ತದೆ. ಆದ್ದರಿಂದ ಮಾನ್ಯ ಕಾರ್ಮಿಕ ಸಚಿವರು ಇದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಈ ವಿಷಯದ ಬಗ್ಗೆ ಹೇಳಿಕೆ ನೀಡಬೇಕಾಗಿ ಕಾರ್ಮಿಕ ಮಂತ್ರಿಗಳಲ್ಲಿ ವಿನಂತಿ.

ಶ್ರೀ ಅಮರನಾಥ ಶೆಟ್ಟಿ (ಕಾರ್ಮಿಕ ಮಂತ್ರಿಗಳ ಪರವಾಗಿ).—ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ ಕಾರ್ಖಾನೆಯಲ್ಲಿ ೨೪೭ ಜನ ಹಂಗಾಮಿ ನೌಕರರು ಕೆಲಸದಲ್ಲಿ ಇದ್ದಾರೆ. ಇವರಿಗೆ ಆಡಳಿತ ವರ್ಗದವರು ೨೪-೮-೮೭ರಂದು ಕೆಲಸದಿಂದ ತೆಗೆಯುವ ಬಗ್ಗೆ ಮೂರು ತಿಂಗಳ ಮುನ್ಸೂಚನೆಯನ್ನು ಕೊಟ್ಟಿದ್ದಾರೆ. ಆಂದರೆ ೩೦-೧೧-೮೭ರಿಂದ ಇವರಿಂಗಳ ಸೇವೆ ಅಗತ್ಯ ವಿಲ್ಲವೆಂದು ತಿಳಿಸಿದ್ದಾರೆ. ಕಾರ್ಖಾನೆಯವರು ಒಂದು ವೇಳೆಯಲ್ಲಿ ಕಾರ್ಮಿಕರು ಒಂದು ವರ್ಷ ಕೆಲಸ ಮಾಡಿದಾದರೆ ಐ. ಡಿ. ಆಕ್ಟ್ ಪ್ರಕಾರ ಸರ್ಕಾರದ ಪೂರ್ವಾನುಮತಿ ಪಡೆದ ನಂತರವೇ ಕೆಲಸದಿಂದ ತೆಗೆಯಲು ಬರುತ್ತದೆ ಹಾಗೆ ಮಾಡದಿದ್ದ ಪಕ್ಷದಲ್ಲಿ ಇಂತಹ ಕ್ರಮವು ಕಾನೂನು ಬಾಹಿರವಾಗುತ್ತದೆ ಇಲ್ಲಿಯ ತನಕ ಆಡಳಿತ ವರ್ಗದವರು ಸರ್ಕಾರಕ್ಕಾಗಲೀ ಕಾರ್ಮಿಕ ಇಲಾಖೆಗಾಗಲೀ ನಿಗದಿತ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಕಲಂ ೨೫ ಎ.ಎಸ್.ಐ.ಡಿ. ಆಕ್ಟ್ ಪ್ರಕಾರ ಈ ರೀತಿ ಸರ್ಕಾರದ ಅನುಮತಿ ಪಡೆಯಬೇಕಾಗುತ್ತದೆ.

(೧೫) ಕುಂದಾಪುರದ ಕಿರಿಯ ಮಹಾವಿದ್ಯಾಲಯದಲ್ಲಿ ಚರಿತ್ರೆ ಮತ್ತು ಅರ್ಥ ಶಾಸ್ತ್ರ ಉಪನ್ಯಾಸಕರನ್ನು ನೇಮಿಸದಿರುವುದು.

ಶ್ರೀ ಪ್ರತಾಪ ಚಂದ್ರ ಶೆಟ್ಟಿ.—ಕುಂದಾಪುರ ಜೂನಿಯರ್ ಕಾಲೇಜಿನಲ್ಲಿ ಇತಿಹಾಸ ಮತ್ತು ಅರ್ಥ ಶಾಸ್ತ್ರದ ಉಪನ್ಯಾಸಕರ ಕೊರತೆ ಇದ್ದು, ಈಗಾಗಲೇ ಹಲವಾರು ಬಾರಿ ಮನವಿಯನ್ನು ಸಲ್ಲಿಸಿರುತ್ತೇವೆ. ವಿದ್ಯಾರ್ಥಿಗಳು ಪ್ರತಿ ವರ್ಷ ಉಪನ್ಯಾಸಕರಿಗಾಗಿ ತಮ್ಮ ಸಾಂಕೇತಿಕ ಪ್ರತಿಭಟನೆಯನ್ನು ಮುಷ್ಕರದ ಮೂಲಕ ಮಾಡಿರುತ್ತಾರೆ. ಆದರೂ ಈ ತನಕ ಉಪನ್ಯಾಸಕರನ್ನು ಭರ್ತಿ ಮಾಡದಿರುವುದು ವಿಷಾದನೀಯ. ಇನ್ನಾದರೂ ಸರ್ಕಾರದವರು ವಿದ್ಯಾರ್ಥಿಗಳ ಸಹನೆಯ ಪರೀಕ್ಷೆಗೆ ಹೋಗದೆ ಅಗತ್ಯವಿರುವಷ್ಟು ಇತಿಹಾಸ ಮತ್ತು ಅರ್ಥ ಶಾಸ್ತ್ರದ ಉಪನ್ಯಾಸಕರನ್ನು ಭರ್ತಿ ಮಾಡಬೇಕೆಂದು ಸದನದ ಮೂಲಕ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ (ಮೀನುಗಾರಿಕೆ ಸಚಿವರು).—ಈ ಉಪನ್ಯಾಸಕರನ್ನು ಆದ್ಯತೆ ಮೇರೆಗೆ ನೇಮಿಸಲು ಕ್ರಮ ಕೈಗೊಳ್ಳುತ್ತೇವೆ.